**ಪಾಠ–8** **ಫೆಬ್ರವರಿ 15–21**

# ಬಿರುಗಾಳಿಯ ಸಮುದ್ರದಿಂದ ಆಕಾಶದ ಮೇಘಗಳ ಕಡೆಗೆ



**ಸಬ್ಬತ್ತಿನ ಮಧ್ಯಾಹ್ನ : ಈ ಪಾಠದ ಅಧ್ಯಯನಕ್ಕಾಗಿ ಓದಿರಿ :** ದಾನಿಯೇಲ 7ನೇ ಅಧ್ಯಾಯ, 2 ಥೆಸ 2:1–12, ರೋಮ 8:1, ಮಾರ್ಕ 13:26, ಲೂಕ 9:26, 12:8 ಮತ್ತು 1 ತಿಮೊಥೆ 2:5.

ಸ್ಮರಣವಾಕ್ಯ : ಆಗ ಅವನ ರಾಜ್ಯಪ್ರಭುತ್ವಗಳೂ ಸಮಸ್ತ ಭೂಮಂಡಲದಲ್ಲಿನ ರಾಜ್ಯಗಳ ಮಹಿಮೆಯು ಪರಾತ್ಪರನ ಭಕ್ತಜನರಿಗೆ ಕೊಡೋಣವಾಗುವವು. ಆತನ ರಾಜ್ಯವು ಶಾಶ್ವತ ರಾಜ್ಯ; ಸಕಲ ದೇಶಾಧಿಪತಿಗಳು ಆತನಿಗೆ ಅಧೀನರಾಗಿ ಸೇವೆ ಮಾಡುವರು (ದಾನಿ 7:27).

ದಾನಿಯೇಲ 7ನೇ ಅಧ್ಯಾಯದಲ್ಲಿರುವ ದರ್ಶನವು ಈ ವಾರದ ಪಾಠದ ವಿಷಯವಾಗಿದೆ. ಇದು 2ನೇ ಅಧ್ಯಾಯದ ಕನಸಿಗೆ ಸಮಾನವಾಗಿದೆ. ಯಾವುದು 2ನೇ ಅಧ್ಯಾಯದಲ್ಲಿ ಪ್ರಕಟವಾಗಿದೆಯೋ ಅದನ್ನು 7ನೇ ಅಧ್ಯಾಯವು ಹೆಚ್ಚಾಗಿ ವಿವರಿಸುತ್ತದೆ. ಮೊದಲನೆಯದು, ದರ್ಶನವು ದಾನಿಯೇಲನಿಗೆ ರಾತ್ರಿಯ ಸಮಯದಲ್ಲಿ ಆಯಿತು, ಚತುರ್ದಿಕ್ಕಿನ ಗಾಳಿಗಳು ಮಹಾಸಾಗರದ ಮೇಲೆ ರಭಸವಾಗಿ ಬೀಸುತ್ತಿದ್ದನ್ನು ವರ್ಣಿಸುತ್ತದೆ. ಕತ್ತಲೆ ಮತ್ತು ನೀರು ಸೃಷ್ಟಿಯನ್ನು ಅವಗಹನೆ ಮಾಡುತ್ತವೆ. ಆದರೆ ಇಲ್ಲಿ ಸೃಷ್ಟಿಯು ತಿರುಚಲ್ಪಟ್ಟಂತೆ ಅಥವಾ ಆಕ್ರಮಣಕ್ಕೆ ಒಳಗಾದಂತೆ ಕಾಣಿಸುತ್ತದೆ. ಎರಡನೆಯದು, ದರ್ಶನದಲ್ಲಿ ಕಂಡ ಪ್ರಾಣಿಗಳು ಅಶುದ್ಧವಾಗಿದ್ದವು ಮತ್ತು ಮಿಶ್ರತಳಿಯದಾಗಿದ್ದವು. ಇದು ಸೃಷ್ಟಿ

ಕ್ರಮದ ಉಲ್ಲಂಘನೆಯನ್ನು ಪ್ರತಿಬಿಂಬಿಸುತ್ತದೆ. ಮೂರನೆಯದು, ಪ್ರಾಣಿಗಳು ಪ್ರಭುತ್ವವನ್ನು ಬೀರುವಂಥವುಗಳಾಗಿ ವರ್ಣಿಸಲ್ಪಟ್ಟಿವೆ. ಏದೇನ್ ತೋಟದಲ್ಲಿ ದೇವರು ಆದಾಮನಿಗೆ ಕೊಟ್ಟಿದ್ದ ಭೂಲೋಕದ ದೊರೆತನವನ್ನು ದುಷ್ಟಶಕ್ತಿಗಳು ಕಸಿದುಕೊಂಡವು. ನಾಲ್ಕನೆಯದು ಮನುಷ್ಯಕುಮಾರನು ಬರುವುದರೊಂದಿಗೆ ದೇವರ ಪ್ರಭುತ್ವವು ಯಾರಿಗೆ ಕೊಡಲ್ಪಟ್ಟಿತೋ ಅವರಿಗೆ ಹಿಂದಿರುಗಿಸಲ್ಪಡುವುದು. ಆದಾಮನು ಏದೇನ್ ತೋಟದಲ್ಲಿ ಏನನ್ನು ಕಳೆದುಕೊಂಡನೋ ಅದನ್ನು ಮನುಷ್ಯಕುಮಾರನು ಪರಲೋಕದಲ್ಲಿ ನಡೆಯುವ ನ್ಯಾಯವಿಚಾರಣೆಯಿಂದ ತಿರುಗಿ ಪಡೆದುಕೊಂಡನು.

ಮೇಲಿನ ವಿವರಣೆಯು ಸತ್ಯವೇದ ಕಲ್ಪನಾತ್ಮಕವಾದ ವಿಹಂಗಮ ನೋಟವನ್ನು ಬಹಳ ಸಾಂಕೇತಿಕವಾದ ದರ್ಶನದ ಹಿನ್ನೆಲೆಯಲ್ಲಿ ಕೊಡುತ್ತದೆ. ಸುದೈವವಾದುದೇನೆಂದರೆ ದರ್ಶನದ ನಿರ್ಣಾತ್ಮಕವಾದ ವಿವರಣೆಗಳು ದೇವದೂತರಿಂದಲೇ ವಿವರಿಸಲ್ಪಟ್ಟಿವೆ. ಹಾಗಾಗಿ ಈ ಆಶ್ಚರ್ಯಕರವಾದ ಪ್ರವಾದನೆಯು ಆರಂಭ ಮತ್ತು ಅಂತ್ಯರೇಖೆಗಳನ್ನು (ಬಾಹ್ಯರೇಖೆಗಳನ್ನು) ನಾವು ಅರ್ಥಮಾಡಿಕೊಳ್ಳಬಹುದು.

ಫೆಬ್ರವರಿ 22ರ ಸಬ್ಬತ್ತಿಗೆ ಈ ಪಾಠವನ್ನು ಸಿದ್ಧಪಡಿಸಲಾಗಿದೆ.

**ಭಾನುವಾರ** **ಫೆಬ್ರವರಿ 16**

## ನಾಲ್ಕು ಮೃಗಗಳು

ದಾನಿಯೇಲ 7ನೇ ಅಧ್ಯಾಯವನ್ನು ಓದಿರಿ. ದಾನಿಯೇಲನು ತೋರಿಸುವುದರಲ್ಲಿರುವ ಸಾರವೇನು ಮತ್ತು ದರ್ಶನವು ಏನನ್ನು ಕುರಿತುದ್ದಾಗಿದೆ?

ದಾನಿಯೇಲನಿಗೆ ತೋರಿಸಲ್ಪಟ್ಟ ಪ್ರಾಣಿಗಳು ನೆಬೂಕದ್ನೆಚ್ಚರನಿಗೆ ತೋರಿಸಿದ ಪ್ರತಿಮೆಯ ಒಂದೊಂದು ಭಾಗಕ್ಕೆ ರಾಜ್ಯದ ಅನುಕ್ರಮವಾಗಿವೆ, ಆದರೆ ಇಲ್ಲಿ ಪ್ರತಿ ರಾಜ್ಯಕ್ಕೆ ಸಂಬಂಧಪಟ್ಟ ಹೆಚ್ಚಿನ ವಿವರಗಳು ಕೊಡಲ್ಪಟ್ಟಿವೆ. ಅನ್ಯರಾಜ್ಯಗಳನ್ನು ಸಂಕೇತಿಸುವ ಮೃಗಗಳು ಅಶುದ್ಧವಾದ ಪ್ರಾಣಿಗಳಾಗಿರುವುದು ಎಷ್ಟು ಆಸಕ್ತಿಕರವಾಗಿದೆ. ನಾಲ್ಕನೆಯ ಮೃಗವನ್ನು ಹೊರತುಪಡಿಸಿ ಇನ್ನುಳಿದ ಮೃಗಗಳು ಮನುಷ್ಯರಿಗೆ ಗೊತ್ತಿರುವ ಜೀವಿಗಳನ್ನು ಹೋಲುತ್ತಿದ್ದವು. ಹಾಗಾಗಿ ಇವು

ಯದ್ವತದ್ವದ ಸಂಕೇತಗಳಲ್ಲ ಪ್ರತಿಯೊಂದು ಪ್ರಾಣಿಯು ಕೆಲವು ಗುಣಾತಿಶಯಗಳನ್ನು ಹೊಂದಿದೆ ಅಥವಾ ತಾವು ಪ್ರತಿನಿಧಿಸುವ ರಾಜ್ಯಕ್ಕೆ ಗುಣಾಂಶಗಳನ್ನು ಸೂಚಿಸುತ್ತದೆ.

**ಸಿಂಹ :** ಸಿಂಹವು ಬ್ಯಾಬಿಲೋನನ್ನು ಪ್ರತಿನಿಧಿಸಲು ಸಮರ್ಪಕವಾದ ಪ್ರಾಣಿ. ರೆಕ್ಕೆಯುಳ್ಳ ಸಿಂಹಗಳ ವಿಗ್ರಹಗಳಿಂದ ಬ್ಯಾಬಿಲೋನಿನ ಗೋಡೆಗಳು ಮತ್ತು ಕಲಾಕೃತಿಗಳು ಅಲಂಕೃತವಾಗಿರುತ್ತಿದ್ದವು. ದರ್ಶನದಲ್ಲಿ ಕಡೆಯದಾಗಿ ಸಿಂಹಗಳ ರೆಕ್ಕೆಗಳು ಕೀಳಲ್ಪಡುತ್ತವೆ. ನಂತರ ಮನುಷ್ಯನು ನೆಟ್ಟಗೆ ನಿಂತುಕೊಳ್ಳುವಂತೆ ಅದನ್ನು ಮಾಡಲಾಗುತ್ತದೆ. ಅದು ಮನುಷ್ಯನ ಹೃದಯವನ್ನು ಸ್ವೀಕರಿಸುತ್ತದೆ. ಈ ಎಲ್ಲಾ ಪ್ರಕ್ರಿಯೆಗಳು ರಾಜರುಗಳ ಆಳ್ವಿಕೆಯಲ್ಲಿದ್ದ ಬ್ಯಾಬಿಲೋನನ್ನು ಸಂಕೇತಿಸುತ್ತವೆ.

**ಕರಡಿ :** ಕರಡಿಯ ಮೇದ್ಯ ಪಾರಸಿಯ ರಾಜ್ಯವನ್ನು ಪ್ರತಿನಿಧಿಸುತ್ತದೆ. ಅದರ ಒಂದು ಹೆಗಲು ಮೇಲೆತ್ತುಕೊಂಡಿತ್ತು ಎಂದರೆ ಮೇದ್ಯರಿಗಿಂತ ಪಾರಸಿಯರ ಹಿರಿಮೆ ಹೆಚ್ಚಾಗಿತ್ತು ಎಂಬ ಅರ್ಥ ಕೊಡುತ್ತದೆ. ಅದರ ಬಾಯಲ್ಲಿ ಹಲ್ಲುಗಳ ನಡುವೆ ಕಚ್ಚಿಕೊಂಡಿದ್ದ ಮೂರು ಪಕ್ಕೆಲುಬುಗಳು ಮೇದ್ಯ ಪಾರಸಿಯ ರಾಜರು ಲೂಧ್ಯ, ಬ್ಯಾಬಿಲೋನ್ ಮತ್ತು ಐಗುಪ್ತದ ಮೇಲೆ ಪಡೆದ ಮೂರು ಗೆಲುವುಗಳಾಗಿವೆ.

**ಚಿರತೆ :** ವೇಗಶಾಲಿಯಾದ ಚಿರತೆಯು ಅಲೆಕ್ಸಾಂಡರ್‌ನಿಂದ ಸ್ಥಾಪಿತವಾದ ಗ್ರೀಕ್ ರಾಜ್ಯವನ್ನು ಪ್ರತಿನಿಧಿಸುತ್ತದೆ. ಅದರ ಪಕ್ಕಗಳಲ್ಲಿದ್ದ ರೆಕ್ಕೆಗಳು ಬಹಳ ವೇಗಶಾಲಿಯಾಗಿದ್ದ ಅಲೆಕ್ಸಾಂಡರನನ್ನು ಸಮರ್ಪಕವಾಗಿ ಪ್ರತಿನಿಧಿಸುತ್ತವೆ, ಆತನು ತನ್ನ ಕಾಲದ ಲೋಕದಲ್ಲಿ ಗೊತ್ತಿದ್ದ ಎಲ್ಲಾ ರಾಜ್ಯಗಳನ್ನು ಗೆದ್ದು ತನ್ನ ಆಡಳಿತಕ್ಕೆ ಒಳಪಡಿಸಿದ್ದನು.

**ಭಯಂಕರ ಮತ್ತು ಭೀಕರವಾದ ಮೃಗ :** ಹಿಂದಿನ ರಾಜ್ಯಗಳು ತಾವು ಸಂಕೇತಿಸುವ ಮೃಗಗಳನ್ನು ಹೋಲುತ್ತಿದ್ದವು. ಆದರೆ ಇದು ತನಗೆ ತಾನೇ ಹೋಲುವ ಘಟಕವಾಗಿತ್ತು. ಮೊದಲನೆಯ ರಾಜ್ಯಗಳು ಸಿಂಹದಂತೆ, ಕರಡಿಯಂತೆ ಮತ್ತು ಚಿರತೆಯಂತೆ ಚಿತ್ರಿತವಾಗಿದ್ದವು. ಆದರೆ ಇದು ಯಾವ ಒಂದು ಪ್ರಾಣಿಯಂತೆಯೂ ಚಿತ್ರಿತವಾಗಿರಲಿಲ್ಲ. ಹಲವು ಕೊಂಬುಗಳುಳ್ಳ ಈ ಮೃಗವು

ಹಿಂದಿನ ಮೃಗಗಳಂತೆ ಹೆಚ್ಚು ಕ್ರೂರವೂ, ದುರಾಶೆಯೂ ಉಳ್ಳದ್ದಾಗಿತ್ತು. ಹೀಗಿರಲಾಗಿ ಇದು ಅಕ್ರೈಸ್ತಶಾಹಿ ರೋಮನ್ನು ಚೆನ್ನಾಗಿ ಪ್ರತಿನಿಧಿಸುತ್ತಿತ್ತು. ಅದು ಲೋಕವನ್ನು ಗೆದ್ದುಕೊಂಡ ಕ್ರೂರವಾಗಿ ಆಳುತ್ತಾ ಸಮಸ್ತವನ್ನು ತನ್ನ ಕಾಲುಗಳಿಂದ ತುಳಿಯುತ್ತಾ ಹೋಯಿತು.

ಮಾನವ ಚರಿತ್ರೆಯ ಈ ಎಲ್ಲಾ ಸಾವಿರಾರು ವರುಷಗಳು ಪ್ರವಾದಿಸಿದಂತೆಯೇ ಬಂದವು ಮತ್ತು ಹೋದವು. ಎಲ್ಲಾ ಗಲಭೆ, ಅಶಾಂತಿ ಮತ್ತು ಅನೇಕ ಸಂದರ್ಭಗಳಲ್ಲಿ ತಲೆದೋರುವ ಅಸ್ತವ್ಯಸ್ತ್ಯ ಇವುಗಳ ನಡುವೆಯೂ ದೇವರು ಆಳುತ್ತಾನೆ ಎಂಬ ತಿಳುವಳಿಕೆಯಿಂದ ನಮಗೆ ಎಷ್ಟು ಆದರಣೆಯು ಸಿಗುತ್ತದೆ? ಇದು ನಂಬಿಕೆಗೆ ಯೋಗ್ಯವಾದ ದೇವರ ವಾಕ್ಯದ ಬಗ್ಗೆ ಏನೆನ್ನು ಬೋಧಿಸುತ್ತದೆ?

**ಸೋಮವಾರ** **ಫೆಬ್ರವರಿ 17**

## ಚಿಕ್ಕಕೊಂಬು

ಓದಿರಿ : ದಾನಿಯೇಲ 7:7,8, 19–25. ನೇರವಾಗಿ ಹುಟ್ಟಿ ಬಂದು ನಾಲ್ಕನೆಯ ಮೃಗದ ಅಂಗವಾಗಿ ಉಳಿದುಕೊಂಡಿರುವ ಅಧಿಕಾರವುಳ್ಳ ಚಿಕ್ಕ ಕೊಂಬು ಯಾವುದು?

ನಿನ್ನೆ ದಿನ ನಾವು ಭಯಂಕರವಾದ, ಹತ್ತು ಕೊಂಬುಗಳ ಪ್ರಾಣಿ ಪ್ರತಿನಿಧಿಸುವ ಲೋಕವನ್ನು ಬಹಳ ಕ್ರೂರವಾಗಿ ಆಳಿದ ಅಕ್ರೈಸ್ತಶಾಹಿರೋಮ್‌ನ ಬಗ್ಗೆ ಕಲಿತೆವು. ಈವಾಗ ಚಿಕ್ಕಕೊಂಬನ್ನು ಅದು ಪ್ರತಿನಿಧಿಸುವ ಅಧಿಕಾರವನ್ನು ಪರಿಗಣಿಸೋಣ ದರ್ಶನದಲ್ಲಿ ವರ್ಣಿತವಾಗಿರುವಂತೆ ನಾಲ್ಕನೇ ಮೃಗಕ್ಕೆ ಹತ್ತುಕೊಂಬುಗಳಿದ್ದವು. ಅವುಗಳಲ್ಲಿ ಮೂರುಕೊಂಬುಗಳು ಕೀಳಲ್ಪಟ್ಟು ಆ ಜಾಗದಲ್ಲಿ ಮತ್ತೊಂದು ಚಿಕ್ಕಕೊಂಬು ಮೊಳೆತು ಬರುವುದಕ್ಕೆ ದಾರಿಯಾಯ್ತು. ಈ ಕೊಂಬಿನಲ್ಲಿ ಮನುಷ್ಯನ ಕಣ್ಣುಗಳಂತಿರುವ ಕಣ್ಣುಗಳೂ ಬಡಾಯಿಕೊಚ್ಚಿಕೊಳ್ಳುವ ಬಾಯಿಯೂ ಇದ್ದವು (ದಾನಿ 7:8). ಅಕ್ರೈಸ್ತಶಾಹಿರೋಮನ್ನು ಪ್ರತಿನಿಧಿಸುವ ಭೀಕರವಾದ ಮೃಗದ ಘಟಕದಿಂದ ಚಿಕ್ಕಕೊಂಬು ಮೈದೋರಿತೆಂದು ನಮಗೆ ಸ್ಪಷ್ಟವಾಯಿತು. ಒಂದು ರೀತಿಯಲ್ಲಿ ಈ ಕೊಂಬು ಅಕ್ರೈಸ್ತಶಾಹಿರೋಮ್‌ನ ಕೆಲವು ಗುಣಲಕ್ಷಣಗಳನ್ನು ವಿಸ್ತಾರವಾಗಿ ಮುಂದುವರೆಸಿಕೊಂಡು ಹೋಗುತ್ತದೆ. ಈ ಕೊಂಬು ದೇವಜನರ

ಮೇಲೆ ಯುದ್ಧಮಾಡುವುದಕ್ಕೆ ಹೊರಟಿದ್ದನ್ನು ನೋಡುತ್ತಾನೆ. ದೇವದೂತನು ಈ ಕೊಂಬು ಮೂರು ಅಧರ್ಮಕಾರ್ಯಗಳನ್ನು ಮಾಡುತ್ತದೆಂದು ದಾನಿಯೇಲನಿಗೆ ಹೇಳುತ್ತಾನೆ: (1) ಪರಾತ್ಪರನಿಗೆ ವಿರುದ್ಧವಾಗಿ ಕೊಚ್ಚಿಕೊಳ್ಳುತ್ತದೆ (2) ಪರಾತ್ಪರನ ಭಕ್ತರನ್ನು ಸವೆಯಿಸುತ್ತದೆ (3) ಕಟ್ಟಳೆಯ ಕಾಲಗಳನ್ನೂ ಧರ್ಮವಿಧಿಗಳನ್ನು ಮಾರ್ಪಡಿಸಲು ಮನಸ್ಸು ಮಾಡುವನು. ತತ್ಪರಿಣಾಮವಾಗಿ ದೇವಜನರು ಈತನ ಕೈಗೆ ಒಪ್ಪಿಸಲ್ಪಟ್ಟರು.

ನಂತರ, ದೇವದೂತನು ಈ ಎಲ್ಲಾ ಅಧರ್ಮಕಾರ್ಯಗಳನ್ನು ಚಿಕ್ಕಕೊಂಬು ನಡೆಸುವ ಕಲಾವಧಿಯನ್ನು ತಿಳಿಸುತ್ತಾನೆ. "ಒಂದುಕಾಲ, ಎರಡುಕಾಲ ಅರ್ಧಕಾಲ. ಪ್ರವಾದನಾ ಭಾಷೆಯಲ್ಲಿರುವ ಈ ನಿದರ್ಶನದಲ್ಲಿ, ಕಾಲ ಎಂಬ ಪದದ ಅರ್ಥ 'ವರ್ಷವೆಂತಲೂ ಕಾಲಗಳು ಎಂದರೆ ಎರಡು ವರ್ಷಗಳೆಂತಲೂ ಅರ್ಧಕಾಲವೆಂದರೆ ಅರ್ಧವರ್ಷವೆಂತಲೂ ಪರಿಗಣಿಸಿದಾಗ ಪ್ರವಾದನೆಯ ಮೂರುವರೆ ವರ್ಷಗಳು ಆಗುತ್ತದೆ. ಇದು ವರ್ಷ–ದಿನಗಳ ನಿಯಮದ ಪ್ರಕಾರ 1260 ವರ್ಷಗಳ ಅವಧಿಯನ್ನು ಸೂಚಿಸುತ್ತದೆ. ಈ ಅವಧಿಯಲ್ಲಿ ಚಿಕ್ಕಕೊಂಬು ದೇವರ ಮೇಲೆ ಆಕ್ರಮಣ ಮಾಡುತ್ತದೆ, ದೇವಜನರನ್ನು ಹಿಂಸೆಪಡಿಸುತ್ತದೆ ಮತ್ತು ದೇವರ ಕಟ್ಟಳೆಗಳನ್ನು ಮಾರ್ಪಡಿಸಲು ಪ್ರಯತ್ನಿಸುತ್ತದೆ. 2 ಥೆಸಲೋನಿಕ 2:1–2ನ್ನು ಓದಿರಿ. ಅಧರ್ಮಸ್ವರೂಪನಿಗೂ ಮತ್ತು ಚಿಕ್ಕಕೊಂಬಿಗೂ ಯಾವ ಹೋಲಿಕೆಗಳಿವೆ? ಇದು ಯಾರ ಅಧಿಕಾರದ ಬಗ್ಗೆ ಮಾತಾಡುತ್ತದೆಂದು ನಾವು ನಂಬುತ್ತೇವೆ ಮತ್ತು ಯಾಕೆ?

ಅಕ್ರೈಸ್ತಶಾಹಿ ರೋಮಿನಿಂದ ಮೇಲೆ ಬಂದು ಇನ್ನೂ ಸಹ ಅದರ ಅಂಗವಾಗಿ ಉಳಿದು ಅಕ್ರೈಸ್ತಶಾಹಿ ರೋಮಿನ ಕಾಲದಿಂದ ಲೋಕವು ಅಂತ್ಯವಾಗುವವರೆಗೂ ಅಂದರೆ ಇಂದಿಗೂ ಅಸ್ತಿತ್ವದಲ್ಲಿರುವ ಆ ಅಧಿಕಾರ (ಶಕ್ತಿ) ಯಾವುದು?

**ಮಂಗಳವಾರ** **ಫೆಬ್ರವರಿ 18**

## ನ್ಯಾಯಾಸನಗಳು ಹಾಕಲ್ಪಟ್ಟವು

ನಾಲ್ಕು ಮೃಗಗಳು ಮತ್ತು ಚಿಕ್ಕಕೊಂಬಿನ ಚಟುವಟಿಕೆಗಳ ದರ್ಶನದ ಬಳಿಕ ಪ್ರವಾದಿಯು ಪರಲೋಕದಲ್ಲಿ ನಡೆಯುವ ನ್ಯಾಯವಿಚಾರಣೆಯ ದೃಶ್ಯವನ್ನು

ನೋಡುತ್ತಾನೆ (ದಾನಿ 7:9,10,13,14). ಪರಲೋಕದಲ್ಲಿರುವ ಪ್ರಾಕಾರವು ನೆರೆದು ಬಂದಾಗ ಆಸನಗಳು ಹಾಕಲ್ಪಟ್ಟವು. ಆಗ ಮಹಾವೃದ್ಧನೊಬ್ಬನು ಆಸೀನನಾದನು. ಪರಲೋಕದ ದೃಶ್ಯವು ತೋರುವಂತೆ ಸಾವಿರ ಸಾವಿರ ಪರಲೋಕ ಜೀವಿಗಳು ಮಹಾವೃದ್ಧನನ್ನು ಸೇವಿಸುತ್ತಿದ್ದರು, ನ್ಯಾಯಸಭೆಯವರು ಕೂತುಕೊಂಡರು. ಪುಸ್ತಕಗಳು ತೆರೆಯಲ್ಪಟ್ಟವು.

ನ್ಯಾಯವಿಚಾರಣೆಯ ಬಗ್ಗೆ ಗಮನಿಸುವುದಕ್ಕೆ ಮುಖ್ಯವಾದುದೇನೆಂದರೆ ಇದು 1260 ವರ್ಷಗಳ ಅವಧಿಯ ಚಿಕ್ಕಕೊಂಬು ನಡೆಸುವ ಕಾರ್ಯಗಳ ಬಳಿಕ ಜರುಗುತ್ತದೆ (ಕ್ರಿ.ಶ. 538–1798; ಶುಕ್ರವಾರದ ಪಾಠವನ್ನು ನೋಡಿರಿ). ಆದರೆ ದೇವರ ರಾಜ್ಯವು ಸ್ಥಾಪಿಸಲ್ಪಡುವುದಕ್ಕಿಂತ ಮುಂಚೆಯೇ ನಡೆಯುತ್ತದೆ. ನಿಜವಾಗಿ ದರ್ಶನದಲ್ಲಿ ಮೂರು ಸಲ ಈ ಕ್ರಮವು ಕಾಣಿಸಿಕೊಳ್ಳುತ್ತದೆ.

ಚಿಕ್ಕಕೊಂಬಿನ ಹಂತ (538–1798).
ಪರಲೋಕದಲ್ಲಿ ನಡೆಯುವ ನ್ಯಾಯವಿಚಾರಣೆ
ದೇವರ ಶಾಶ್ವತ ರಾಜ್ಯ

ಓದಿರಿ : ದಾನಿಯೇಲ 7:13, 14, 21, 22, 26, 27. ಯಾವ ರೀತಿಯಲ್ಲಿ ನ್ಯಾಯವಿಚಾರಣೆಯು ದೇವಜನರಿಗೆ ಲಾಭ ತಂದುಕೊಡುತ್ತದೆ?

ಗುಡಾರದಿಂದಲೂ ಮತ್ತು ಆಲಯದಿಂದಲೂ ನ್ಯಾಯವಿಚಾರಣೆ ಮಾಡುವ ಅನೇಕ ಕಾರ್ಯಗಳನ್ನು ಹಳೆ ಒಡಂಬಡಿಕೆಯು ವಿವರಿಸುತ್ತದೆ. ಆದರೆ ಇಲ್ಲಿ ಉಲ್ಲೇಖಿತವಾಗಿರುವ ನ್ಯಾಯವಿಚಾರಣೆ ಭಿನ್ನವಾದದ್ದಾಗಿದೆ. ಇದು ವಿಶ್ವಮಟ್ಟದ ನ್ಯಾಯವಿಚಾರಣೆಯಾಗಿದ್ದು, ಚಿಕ್ಕಕೊಂಬಿನ ಮೇಲೆ ಮಾತ್ರ ಪರಿಣಾಮ ಬೀರುವಂಥದ್ದಾಗಿರದೆ ಪರಾತ್ಪರನ ಭಕ್ತರಿಗೂ ಅನ್ವಯವಾಗುವಂಥದ್ದಾಗಿದೆ, ಇವರಿಗೆ ತಾನೆ ಅಂತ್ಯದಲ್ಲಿ ರಾಜ್ಯವು ಕೊಡೋಣವಾಗುತ್ತದೆ.

ದಾನಿಯೇಲ 7ನೇ ಅಧ್ಯಾಯವು ನ್ಯಾಯವಿಚಾರಣೆಯ ಬಗ್ಗೆ ಅಥವಾ ವಿಚಾರಣೆಯ ಆರಂಭ ಮತ್ತು ಅಂತ್ಯದ ಬಗ್ಗೆ ಏನನ್ನು ವಿವರಿಸುವುದಿಲ್ಲ. ಆದರೆ ಚಿಕ್ಕಕೊಂಬು ದೇವರ ವಿರುದ್ಧ ಮತ್ತು ಆತನ ಭಕ್ತರ ವಿರುದ್ಧ ಆಕ್ರಮಣ

ಮಾಡಲು ನಿಂತುಕೊಂಡ ಪ್ರಯುಕ್ತ ನ್ಯಾಯವಿಚಾರಣೆಯು ನಡೆಯುತ್ತದೆಂದು ಸೂಚಿಸುತ್ತದೆ. ಇಲ್ಲಿರುವ ಮುಖ್ಯವಾದ ಅಂಶವೇನೆಂದರೆ ವಿಶ್ವಮಟ್ಟಕ್ಕೆ ನಡೆಯುವ ನ್ಯಾಯವಿಚಾರಣೆಯ ಆರಂಭವನ್ನು ಗುರುತಿಸುವಂಥದ್ದು. ದಾನಿಯೇಲ 8 ಮತ್ತು 9ನೇ ಅಧ್ಯಾಯಗಳಿಂದ (ಮುಂದಿನ ವಾರಗಳಲ್ಲಿ ನೋಡಿರಿ) ನ್ಯಾಯವಿಚಾರಣೆಯ ಆರಂಭಕಾಲ ಮತ್ತು ನ್ಯಾಯವಿಚಾರಣೆಯು ಪರಲೋಕದ ದೇವದರ್ಶನ ಗುಡಾರದಲ್ಲಿ ಪರಲೋಕದ ಮಹಾದೋಷ ಪರಿಹಾರಕ ದಿನದಲ್ಲಿ ನಡೆಯುವ ಶುದ್ಧೀಕರಣೆಗೆ ಸಂಬಂಧಿಸಿದೆ. ಇಲ್ಲಿರುವ ಪಾಠವೇನೆಂದರೆ ಕ್ರಿಸ್ತಾಗಮನ ಪೂರ್ವದಲ್ಲಿಯೇ (ಮುಂಚೆಯೇ) ಆತನ ಜನರ ನ್ಯಾಯವಿಚಾರಣೆಯಾಗುವುದು (ದಾನಿ 7:22).

ಯೇಸುಕ್ರಿಸ್ತನು ಶಿಲುಬೆಯ ಮೇಲೆ ನಮಗಾಗಿ ಏನನ್ನು ಸಾಧಿಸಿದನೋ ಅದರ ತಿಳುವಳಿಕೆ ನಾವು ಏಕೆ ನ್ಯಾಯವಿಚಾರಣೆಯ ದಿನದಲ್ಲಿ ಭರವಸವುಳ್ಳವರಾಗಿರಬೇಕೆಂಬುದಕ್ಕೆ ಪ್ರಧಾನವಾದದಾಗಿದೆ. ಶಿಲುಬೆಯಿಲ್ಲದೆ ನಮಗೆ ಯಾವ ನಿರೀಕ್ಷೆ ಇರುತ್ತದೆ ಅಥವಾ ಇರುತ್ತಿತ್ತು? (ರೋಮ 8:1).

**ಬುಧವಾರ** **ಫೆಬ್ರವರಿ 19**

## ಮನುಷ್ಯಕುಮಾರನ ಆಗಮನ

ಓದಿರಿ: ದಾನಿಯೇಲ 7:13. ಇಲ್ಲಿ ಮನುಷ್ಯಕುಮಾರನು ಯಾರು, ಅವನನ್ನು ಹೇಗೆ ಗುರುತು ಹಿಡಿಯುತ್ತೀರಿ? (ಮಾರ್ಕ 13:26, ಮತ್ತಾಯ 8:20, 9:6, ಲೂಕ 9:26 ಮತ್ತು 12:8ನ್ನೂ ಸಹ ನೋಡಿರಿ).

ನ್ಯಾಯವಿಚಾರಣೆಯು ನಡೆಯುತ್ತಿದ್ದಂತೆ ಬಹಳ ಮುಖ್ಯವಾದ ರೂಪವು ದೃಶ್ಯವನ್ನು ಪ್ರವೇಶಿಸುತ್ತದೆ: ಮನುಷ್ಯಕುಮಾರನು. ಈತನು ಯಾರು?

ಮೊದಲು ಮನುಷ್ಯಕುಮಾರನು ವೈಯಕ್ತಿಕವಾದ ಪರಲೋಕರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಆದರೆ ಬಿರುದು ಸೂಚಿಸುವಂತೆ ಆತನು ಮನುಷ್ಯನ ಗುಣಸ್ವಭಾವವನ್ನು ಸಹಾ ಪ್ರದರ್ಶಿಸುತ್ತಾನೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಆತನು ದೈವಮಾನವ ವ್ಯಕ್ತಿ. ಆತನು ನ್ಯಾಯವಿಚಾರಣೆಯಲ್ಲಿ ಕ್ರಿಯಾಶೀಲವಾದ ಪಾತ್ರವಹಿಸಲು ಬರುತ್ತಾನೆ. ಎರಡನೆಯದು,

ಮನುಷ್ಯಕುಮಾರನು ಮೇಘಗಳೊಂದಿಗೆ ಬರುವುದು ಹೊಸ ಒಡಂಬಡಿಕೆಯಲ್ಲಿ ಎರಡನೇ ಬರೋಣದ ಸಾಮಾನ್ಯವಾದ ಬಿಂಬವಾಗಿದೆ. ಏನೇ ಆಗಲಿ, ದಾನಿಯೇಲ 7:13 ಮನುಷ್ಯಕುಮಾರನು ಪರಲೋಕದಿಂದ ಭೂಮಿಗೆ ಇಳಿದು ಬರುತ್ತಾನೆಂದು ನಿರ್ದಿಷ್ಟವಾಗಿ ಹೇಳುವುದಿಲ್ಲ. ಆದರೆ ಆತನು ಅಡ್ಡಡ್ಡವಾಗಿ ಪರಲೋಕದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಮಹಾವೃದ್ಧನ ಮುಂದೆ ಕಾಣಿಸಿಕೊಳ್ಳಲು ಧಾವಿಸುತ್ತಾನೆ. ಮೂರನೆಯದು, ಮನುಷ್ಯಕುಮಾರನು ಆಕಾಶದ ಮೇಘಗಳೊಂದಿಗೆ ಬರುವ ವರ್ಣನೆಯು ಆತನು ಎಲ್ಲರಿಗೂ ಮುಂದೆ ಕಾಣಿಸಿಕೊಳ್ಳಲು ಸೂಚಿಸುತ್ತದೆ.

ಆದರೆ ಈ ಚಿತ್ರವು ಮಹಾಯಾಜಕನು ಧೂಪದ ಹೊಗೆಯಿಂದ ಸುತ್ತುವರೆಯಲ್ಪಟ್ಟು ಮಹಾದೋಷಪರಿಹಾರಕ ದಿನದಂದು ಮಹಾಪರಿಶುದ್ಧ ಸ್ಥಳಕ್ಕೆ ಹೋಗಿ ಅದರ ಶುದ್ಧೀಕರಣೆಯನ್ನು ಮಾಡುವುದನ್ನು ನೆನಪಿಗೆ ತರುತ್ತದೆ.

ಮನುಷ್ಯಕುಮಾರನು ಒಬ್ಬ ರಾಜವಂಶರೂಪನು ಸಹ ಆಗಿದ್ದಾನೆ. ಆತನು ದೊರೆತನವನ್ನೂ ಘನತೆಯನ್ನೂ ಮತ್ತು ರಾಜ್ಯವನ್ನೂ ಸ್ವೀಕರಿಸುತ್ತಾನೆ. ಸಕಲ ಜನಾಂಗ ಕುಲ ಭಾಷೆಗಳವರು ಅವನನ್ನು ಸೇವಿಸುತ್ತಾರೆ (ದಾನಿ 7:14). ಕ್ರಿಯಾಪದವಾದ ಸೇವಿಸು ಎಂಬುದು ಆರಾಧಿಸು ಎಂಬ ಅರ್ಥವನ್ನು ಸಹ ಕೊಡುತ್ತದೆ. ದಾನಿಯೇಲ 1–7 ಅಧ್ಯಾಯಗಳಲ್ಲಿ ಒಟ್ಟು 9 ಸಲ ಈ ಪದವು ಕಾಣಿಸುತ್ತದೆ (ದಾನಿ 3:12, 14, 17, 18, 28 ಮತ್ತು 6:16, 20 ಮತ್ತು 7:14, 27). ವಚನಗಳು ದೇವರಿಗೆ ಗೌರವವನ್ನು ಕೊಡುವ ಆಲೋಚನೆಯನ್ನು ಮುಟ್ಟಿಸುತ್ತದೆ. ಆದುದರಿಂದ ದೇವರ ಕಟ್ಟಳೆಗಳನ್ನು ಬದಲು ಮಾಡುವ ಪ್ರಯತ್ನದ ಪರಿಣಾಮವಾಗಿ ಚಿಕ್ಕಕೊಂಬು ಪ್ರತಿನಿಧಿಸುವ ಧಾರ್ಮಿಕ ವ್ಯವಸ್ಥೆಯು ದೇವರಿಗೆ; ಸಲ್ಲತಕ್ಕ ಆರಾಧನೆಯನ್ನು ಭ್ರಷ್ಟಪಡಿಸುತ್ತದೆ. ಇಲ್ಲಿ ವರ್ಣಿತವಾಗಿರುವ ನ್ಯಾಯವಿಚಾರಣೆಯು ಸತವಾದ ಆರಾಧನೆಯನ್ನು ಅಂತ್ಯದಲ್ಲಿ ಮತ್ತೆ ಸ್ಥಾಪಿಸಲ್ಪಡುವುದನ್ನು ತೋರಿಸುತ್ತದೆ. ಪೋಪುಶಾಹಿ ವ್ಯವಸ್ಥೆಯಂತೆ ಸ್ಥಾಪಿತವಾದ ಆರಾಧನಾ ವ್ಯವಸ್ಥೆಯು ಪಾಪಿಯಾದ ಮನುಷ್ಯನನ್ನು ದೇವರಿಗೂ ಮನುಷ್ಯರಿಗೂ ಮಧ್ಯಸ್ಥನನ್ನಾಗಿ ಇಟ್ಟಿದೆ. ಯೇಸುಕ್ರಿಸ್ತನು ಮಾತ್ರ ಮಾನವನನ್ನು ಪ್ರತಿನಿಧಿಸುವ

ಮಧ್ಯಸ್ಥನಾಗಲು ಸಮರ್ಥನಾಗಿದ್ದಾನೆಂದು ದಾನಿಯೇಲನು ಹೇಳುತ್ತಾನೆ. ಸತ್ಯವೇದವು ಹೇಳುವಂತೆ– "ದೇವರು ಒಬ್ಬನೇ, ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ" (1 ತಿಮೊಥೆ 2:5).

ಸತ್ಯವೇದದಲ್ಲಿ ಯೇಸುಕ್ರಿಸ್ತನ ಜೀವನ ಮತ್ತು ಆತನ ಸ್ವಭಾವದ ವಿಷಯದಲ್ಲಿ ನಾವು ಓದಿರುವುಗಳಲ್ಲಿ ಚಿತ್ರಿಸಿರುವಂತೆ ನ್ಯಾಯವಿಚಾರಣೆಯಲ್ಲಿ ಆತನೇ ಪ್ರಧಾನನು ಎಂದು ತಿಳಿಯುವುದು ಬಹಳವಾಗಿ ಆದರಣೆಯನ್ನು ಕೊಡುತ್ತದೆ ಯಾಕೆ?

**ಗುರುವಾರ** **ಫೆಬ್ರವರಿ 20**

## ಪರಾತ್ಪರನ ಭಕ್ತರು

ಈ ವಚನಗಳ ಪ್ರಕಾರ ದೇವಜನರಿಗೆ ಏನಾಗುತ್ತದೆ? ದಾನಿ 7:18, 21, 22, 25, 27.

ಪರಾತ್ಪರನ ಭಕ್ತರು ಎಂಬುದು ದೇವಜನರಿಗೆ ಕೊಟ್ಟಿರುವ ಹೆಸರು. ಅವರನ್ನು ಚಿಕ್ಕಕೊಂಬು ಪ್ರತಿನಿಧಿಸುವ ಅಧಿಕಾರವು ಆಕ್ರಮಣ ಮಾಡುತ್ತದೆ. ಯಾಕೆಂದರೆ ಅವರು ದೇವರ ವಾಕ್ಯಕ್ಕೆ ನಂಬಿಗಸ್ತರಾಗಿ ಉಳಿಯಲು ಒತ್ತಾಯಿಸಲ್ಪಡುತ್ತಾರೆ. ಅವರು ಪೋಪುಶಾಹಿಯ ಅವಧಿಯಲ್ಲಿ ಹಿಂಸೆಗೊಳಗಾಗುತ್ತಾ ಕ್ರೈಸ್ತರು ಅಕ್ರೈಸ್ತರೋಮ್ ಶಾಹಿಯ ಕಾಲದಲ್ಲೂ ಹಿಂಸಿಸಲ್ಪಟ್ಟರು (ಅದೇ ನಾಲ್ಕನೇ ಮೃಗ). ಆದರೆ ದಾನಿಯೇಲ 7:25ರಲ್ಲಿ ಉಲ್ಲೇಖವಾಗಿರುವ ಹಿಂಸೆಯು ಚಿಕ್ಕಕೊಂಬು ಪರಾತ್ಪರನ ಭಕ್ತರ ಮೇಲೆ ಮಾಡುವ ಹಿಂಸೆಯಾಗಿದೆ. ಚಿಕ್ಕಕೊಂಬು ಅಕ್ರೈಸ್ತರೋಮ್ ಶಾಹಿಯು ಕೊನೆಗೊಂಡಾಗ ಮೇಲೆಬಂತು. ಏನೇ ಆಗಲಿ ದೇವಜನರು ಲೋಕಶಕ್ತಿಯಿಂದ ಎಂದೆಂದಿಗೂ ತುಳಿಯಲ್ಪಡುತ್ತಲೇ ಇರುವುದಿಲ್ಲ. ದೇವರ ರಾಜ್ಯವು ಲೋಕದ ಎಲ್ಲಾ ರಾಜ್ಯಗಳನ್ನು ಎತ್ತಿಹಾಕುತ್ತದೆ.

ನಿಜವಾದ ದರ್ಶನದಲ್ಲಿ ಆಸಕ್ತಿಕರವಾದುದು ಯಾವುದೆಂದರೆ ಮನುಷ್ಯಕುಮಾರನಿಗೆ ದೊರೆತನ, ಘನತೆ ಮತ್ತು ರಾಜ್ಯವು ಕೊಡೋಣವಾಗುವುದು (ದಾನಿ 7:14). ಆದರೆ ದೇವದೂತನು ಕೊಡುವ ವ್ಯಾಖ್ಯಾನದಲ್ಲಿ ಪರಾತ್ಪರನ ಭಕ್ತರಿಗೆ ರಾಜ್ಯವು ಕೊಡೋಣವಾಗುತ್ತದೆ (ದಾನಿ 7:18). ಇದರಲ್ಲಿ ಯಾವ

ವೈರುದ್ಧವೂ ಇಲ್ಲ. ಯಾಕೆಂದರೆ ಮನುಷ್ಯಕುಮಾರನು ದೇವರಿಗೂ ಮಾನವನಿಗೂ ಸಂಬಂಧಪಡುತ್ತಾನೆ, ಆತನ ಜಯವು ಆತನು ಪ್ರತಿನಿಧಿಸುವವರ ಜಯವೇ ಆಗಿದೆ.

ಯೇಸುವೇ ನೀನು ಮೆಸ್ಸೀಯ ಎಂದು ಮಹಾಯಾಜಕನು ಕೇಳಿದರೆ ದೇವಕುಮಾರನಾದ ಯೇಸುವು ಕೀರ್ತನೆಗಳು 110:1ರ ಕಡೆಗೆ ಹಿಂದಕ್ಕೆ ತೋರಿಸುತ್ತಾನೆ ಮತ್ತು ದಾನಿ 7:13, 14, ಭಗವಂತನ ಕುಮಾರನಾದ ಕ್ರಿಸ್ತನೋ ನೀನು? ಎಂದು ಆತನನ್ನು ಕೇಳಲಾಗಿ ಯೇಸು–ನಾನೇ, ಇದಲ್ಲದೆ ಮನುಷ್ಯಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಆಸೀನನಾಗಿರುವುದನ್ನೂ ಆಕಾಶದ ಮೇಘಗಳೊಂದಿಗೆ ಬರುವುದನ್ನೂ ನೋಡುವಿರಿ ಅಂದನು" (ಮಾರ್ಕ 14:62). ಪರಲೋಕದ ನ್ಯಾಯಪೀಠದಲ್ಲಿ ನಮ್ಮನ್ನು ಪ್ರತಿನಿಧಿಸುವವನು ಯೇಸುಕ್ರಿಸ್ತನೇ ಆಗಿದ್ದಾನೆ. ಆತನು ಈಗಾಗಲೇ ಅಂಧಕಾರದ ಶಕ್ತಿಗಳನ್ನು ಸೋಲಿಸಿ ಜಯವನ್ನು ಅವನ ಬಳಿಗೆ ಬರುವವರೊಂದಿಗೆ ಹಂಚಿಕೊಳ್ಳುತ್ತಾನೆ. ಆದುದರಿಂದ ಭಯಪಡುವುದಕ್ಕೆ ಕಾರಣವೇ ಇಲ್ಲ. ಅಪೋಸ್ತಲನಾದ ಪೌಲನು ಸೂಕ್ತವಾದ ರೀತಿಯಲ್ಲಿ ಹೀಗೆ ಹೇಳುತ್ತಾನೆ: ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ. ಹೇಗೆಂದರೆ ಮರಣವಾಗಲಿ ಜೀವವಾಗಲಿ ದೇವದೂತರಾಗಲಿ ದುರಾತ್ಮಗಳಾಗಲಿ ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ ಮಹತ್ವಗಳಾಗಲಿ, ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು ನಮ್ಮ ಕರ್ತನಾದ ಯೇಸುಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರೆವೆಂದು ನನಗೆ ನಿಶ್ಚಯ ಉಂಟು (ರೋಮ 8:37–39).

ಈವಾಗ ದಾನಿಯೇಲನ ದರ್ಶನವು ಚರಿತ್ರೆಯನ್ನು ಹೇಗೆ ಕರಾರುವಕ್ಕಾಗಿ ವಿವರಿಸುತ್ತದೆಂದು ನೋಡಿರಿ. ನಾವು, ದೇವರು ನಮ್ಮ ಭವಿಷ್ಯದಲ್ಲಿಟ್ಟಿರುವ ಎಲ್ಲಾ ವಾಗ್ದಾನಗಳನ್ನು ನಂಬುವಂತೆ ಇದು ಹೇಗೆ ನಮಗೆ ಸಹಾಯ ಮಾಡುತ್ತದೆ?

**ಶುಕ್ರವಾರ** **ಫೆಬ್ರವರಿ 21**

**ಹೆಚ್ಚಿನ ಚಿಂತನೆ :** ಚರಿತ್ರೆಯ ಕಡೆಗೆ ಸ್ವಲ್ಪ ನೋಟ ಬೀರುವಾಗ ಅದು ರೋಮ್ ಸಾಮ್ರಾಜ್ಯದ ಪತನವಾದ ನಂತರ ಅಂದರೆ ಅದನ್ನು ಉತ್ತರ ದಿಕ್ಕಿನಿಂದ ಬಂದ ಅನಾಗರೀಕರು ಅದರ ಮೇಲೆ ಆಕ್ರಮಣ ಮಾಡುತ್ತಾರೆ. ರೋಮ್‌ನ ಬಿಷಪ್ ಇದರ ಅನುಕೂಲವನ್ನು ಪಡೆದುಕೊಂಡು ಮೂರು ಅನಾಗರೀಕ ಗುಡ್ಡಗಾಡಿನ ಪಂಗಡಗಳನ್ನು ಅಧಿಕಾರದಿಂದ ಕೆಳಗೆ ಇಳಿಸುತ್ತಾನೆ ಮತ್ತು ತನ್ನನ್ನು ತಾನೇ ರೋಮನ ಏಕಮಾತ್ರ ಅಧಿಕಾರಿಯಾಗಿ ಕ್ರಿ.ಶ. 538ರಲ್ಲಿ ಸ್ಥಾಪಿಸಿಕೊಳ್ಳುತ್ತಾನೆ. ಈ ಪ್ರಕ್ರಿಯೆಗಳಲ್ಲಿ ರೋಮ್ ಸಾಮ್ರಾಜ್ಯದ ಅನೇಕ ಸಾಂಸ್ಥಿಕ ಮತ್ತು ರಾಜಕೀಯ ಕಾರ್ಯಗಳನ್ನು ಅಂಗೀಕರಿಸಿಕೊಳ್ಳುತ್ತಾನೆ. ಈ ಸಮಯದಿಂದ ಪೋಪುಶಾಹಿಯು ಐಹಿಕ ಮತ್ತು ಧಾರ್ಮಿಕ ಅಧಿಕಾರವನ್ನು ಪಡೆದುಕೊಂಡು ಹೊರಹೊಮ್ಮಿತು. ನೆಪೋಲಿಯನ್ನನು ಕ್ರಿ.ಶ. 1798ರಲ್ಲಿ ಅವನನ್ನು ಬಂಧಿಸುವವರೆಗೂ ಮುಂದುವರೆಯಿತು. ಇದು ರೋಮ್‌ಶಾಹಿಗೆ ಅಂತ್ಯವನ್ನು ತರಲಿಲ್ಲ. ನಿರ್ದಿಷ್ಟವಾದ ಹಂತಕ್ಕೆ ಹಿಂಸೆಯು ಕೊನೆಯಾಯ್ತು. ಪೋಪನು ತನ್ನನ್ನು ತಾನು ಕ್ರೈಸ್ತನ ಬದಲಿಯೆಂದು ನಿರೂಪಿಸಿಕೊಳ್ಳುತ್ತಾನೆ ಮತ್ತು ಸತ್ಯವೇದಕ್ಕೆ ವಿರುದ್ಧವಾದ ಅನೇಕ ಉಪದೇಶಗಳನ್ನು ಅಭ್ಯಾಸಗಳನ್ನು ಜಾರಿಗೆ ತರುತ್ತಾನೆ, ಪ್ರಾಯಶ್ಚಿತ್ತ ಲೋಕ–ಪರ್ಗೇಟರಿ, ಪ್ರಾಯಶ್ಚಿತ್ತ–ಪಿನನ್ಸ್, ಕಿವಿಯಲ್ಲಿ ಗುಟ್ಟಾಗಿ ಹೇಳುವ ಪಾಪದ ಅರಿಕೆ ಸಬ್ಬತ್ತಿನ ಆಜ್ಞೆಯನ್ನು ಭಾನುವಾರಕ್ಕೆ ಬದಲಾಯಿಸಿದುದು ಮುಂತಾದವು. ಕಾಲಗಳು ಮತ್ತು ಕಟ್ಟಳೆಗಳನ್ನು ಪೋಪುಶಾಹಿಯು ಜಾರಿಗೆ ತಂದಿತು.

ತನ್ನ ಸ್ವಂತಶಕ್ತಿಯಿಂದ ಮನುಷ್ಯನು ವೈರಿಯ ಆರೋಪಗಳನ್ನು ಭರಿಸಲಾರನು. ಪಾಪ ತುಂಬಿದ ವಸ್ತುಗಳನ್ನುಟ್ಟು ತನ್ನ ತಪ್ಪಿತಸ್ಥ ಮನೋಭಾವದಿಂದ ಅರಿಕೆ ಮಾಡುತ್ತಾ ದೇವರ ಮುಂದೆ ನಿಲ್ಲುತ್ತಾನೆ. ಆದರೆ ನಮ್ಮ ವಕೀಲನಾದ ಯೇಸುಕ್ರಿಸ್ತನು ಯಾರ್‍ಯಾರು ನಂಬಿಕೆಯಿಂದ ತಮ್ಮ ಆತ್ಮಗಳನ್ನು ಅವನಿಗೆ ಒಪ್ಪಿಸಿಕೊಟ್ಟು ಆತನ ಬಳಿಗೆ ಪಶ್ಚಾತ್ತಾಪದಿಂದ ಬರುತ್ತಾರೋ ಅವರೆಲ್ಲರ ಪರವಾಗಿ ದೇವರ ಮುಂದೆ ಪರಿಣಾಮಕಾರಿಯಾದ ವಿಜ್ಞಾಪನೆಗಳನ್ನು ಸಲ್ಲಿಸುತ್ತಾನೆ. ಅವರಿಗಾಗಿ ಆತನು ಬೇಡುತ್ತಾನೆ, ಕಲ್ವಾರಿಯ ಬಲಯುತವಾದ ವಾದಗಳಿಂದ ಜನರ ದೂಷಣೆಗಾರನನ್ನು ಸೋಲಿಸುತ್ತಾನೆ.

ಕ್ರಿಸ್ತನು ದೇವರ ಆಜ್ಞೆಗಳಿಗೆ ಪರಿಪೂರ್ಣವಾಗಿ ವಿಧೇಯನಾದುದರಿಂದ ಪರಲೋಕದ ಮತ್ತು ಭೂಲೋಕದ ಎಲ್ಲಾ ಅಧಿಕಾರಿಗಳು ಆತನಿಗೆ ಕೊಡಲ್ಪಟ್ಟಿವೆ.

ಆತನು ತನ್ನ ತಂದೆಯು ಪಾಪಿಗೆ ತೋರಿಸುವ ಕರುಣೆ ಮತ್ತು ಮರುಸಂಧಾನದ ಅವಕಾಶಕ್ಕೆ ದಾವೆ ಹೂಡುತ್ತಾನೆ. ತನ್ನ ಜನರನ್ನು ದೂಷಿಸುವವನಿಗೆ 'ಓ ಸೈತಾನನೇ ಕರ್ತನಾದ ದೇವರು ನಿನ್ನನ್ನು ಖಂಡಿಸಲಿ' ಇವರು ನನ್ನ ರಕ್ತದಿಂದ ಕ್ರಯಕ್ಕೆ ಕೊಳ್ಳಲ್ಪಟ್ಟವರು, ಉರಿಯುವ ಒಲೆಯಿಂದ ಹೊರಗೆಳೆದ ಕೊಳ್ಳಿಗಳು ಎಂದು ಹೇಳುತ್ತಾನೆ. ಯಾರ್ಯಾರು ಅವನ ಮೇಲೆ ನಂಬಿಕೆ ಇಟ್ಟರೋ ಅವರಿಗೆ ಭರವಸೆ ಕೊಡುತ್ತಾನೆ: ಇಗೋ, ನಿನ್ನ ದೋಷವನ್ನು ನಿನ್ನಿಂದ ತೊಲಗಿಸಿದ್ದೇನೆ, ನಿನಗೆ ಶ್ರೇಷ್ಠ ವಸ್ತ್ರಗಳನ್ನು ತೊಡಿಸುವೆನು" ಎಂದು ಹೇಳುತ್ತಾನೆ, ಜೆಕರ್ಯ 3:4– ಎಲೆನ್ ಜಿ ವೈಟಮ್ಮನವರ ಪ್ರವಾದಿಗಳು ಮತ್ತು ಅರಸರು ಪುಸ್ತಕದಲ್ಲಿ ಪುಟ 586, 587.

## ಚರ್ಚಿಸಬೇಕಾದ ಪ್ರಶ್ನೆಗಳು

1. ಅನೇಕ ಶತಮಾನಗಳ ಹಿಂದೆ ಅನ್ಯಧರ್ಮೀಯ ಅಥವಾ ರೋಮಿನಿಂದ ಒಂಟಿಯಾಗಿ ಮೇಲೇರಿ ಬಂದು ದೇವಜನರನ್ನು ಹಿಂಸೆಪಡಿಸುತ್ತಾ ಇಂದಿಗೂ ಅಸ್ತಿತ್ವದಲ್ಲಿರುವ ಅಂಥ ಅಧಿಕಾರ ಯಾವುದು? ನಾಲ್ಕನೇ ಮೃಗದಿಂದ ಮೈದಳೆದು ಅದರ ಭಾಗವಾಗಿಯೇ ಉಳಿದ ಚಿಕ್ಕಕೊಂಬಿನ ಎಲ್ಲಾ ಗುಣಲಕ್ಷಣಗಳನ್ನು ನೋಡಿರಿ.

2. ಯೇಸುಕ್ರಿಸ್ತನು ಭೂಮಿಗೆ ಬಂದು ಹುಟ್ಟುವುದಕ್ಕೆ 150 ವರ್ಷಗಳ ಮೊದಲೇ ಕಣ್ಮರೆಯಾದ ಗ್ರೀಕ್ ಸಾಮ್ರಾಜ್ಯವು ಅನ್ಯಧರ್ಮೀಯ (ಪ್ಯಾಗನ್) ಎನ್ನಿಸಿಕೊಳ್ಳುತ್ತದೆ. ಹಾಗೆಯೇ ಚಿಕ್ಕಕೊಂಬು ಸಹಾ ಅನ್ಯಧರ್ಮೀಯ (ಪ್ಯಾಗನ್ ರೋಮ್) ಅನ್ನಿಸಿಕೊಂಡರೂ ಇದನ್ನು ನಾವು ಪೋಪ್‌ಶಾಹಿ (ಪ್ಯಾಪಲ್ ರೋಮ್) ಎಂದು ಗುರುತಿಸಬೇಕು. ಈ ಅಧಿಕಾರವನ್ನು ನಾವು ಸ್ಪಷ್ಟವಾಗಿ ಗುರುತಿಸುವಾಗ ಊಹೆ (ಅನುಮಾನ)ಗಳಿಂದ ರಕ್ಷಿಸಿಕೊಳ್ಳಲು ಸಹಾಯವಾಗುತ್ತದೆ ಯಾಕೆ?

3. ಈ ಸ್ಪಷ್ಟವಾದ ಗುರುತಿನ ಚಹರೆಗಳು ಚಿಕ್ಕಕೊಂಬು ಎಂಬುದು ಭವಿಷ್ಯದಲ್ಲಿ ಬರುವ ಯಾವುದೋ ಒಂದು ಅಧಿಕಾರವೆಂಬ ತಪ್ಪಾದ ನಂಬಿಕೆಯಿಂದಲೂ ಸಹ ನಮ್ಮನ್ನು ರಕ್ಷಿಸುತ್ತದೆ ಹೇಗೆ?